

## ಮೈಗೆ ಹಿತ ಖಾದಿ ಉಡುಗೆ

ಕಾಶ್ಮೀರಿ, ಕಾಶಿದಾ, ಕಲಂಕರಿ, ಇಕತ್, ಚಿಕನ್‌ಕರಿ, ಡೆನಿಮ್ ಸೇರಿದಂತೆ ಎಷ್ಟೇ ಪರಿಸರಸ್ನೇಹಿ ಸೀರೆಗಳು ಮಾರುಕಟ್ಟೆಗೆ ಬಂದಿದ್ದರೂ ಆರಾಮವಾಗಿ ಧರಿಸಲು ಖಾದಿಯನ್ನು ಮೀರಿಸುವ ಇನ್ನೊಂದು ಉಡುಗೆ ಇಲ್ಲವೆಂದೇ ಹೇಳಬಹುದು. ಖಾದಿ ಉಡುಪು ಎಂದರೆ ಇದರ ನಿರ್ವಹಣೆ ಕಷ್ಟ ಎಂಬ ಭಾವನೆ ಅನೇಕರದ್ದು. ಅಲ್ಲದೆ ಖಾದಿ ಎಂದರೆ, ಒರಟು ಎಂಬ ಭಾವನೆಯೂ ಇದೆ. ಬಿಸಿಲು ಹೆಚ್ಚಿದ್ದರೂ, ಮೈಕೊರೆಯುವ ಚಳಿ ಇದ್ದರೂ ಖಾದಿ ಸೀರೆ ಯಾವತ್ತೂ ಮೈಗೆ ಹಿತವೆನಿಸುತ್ತದೆ. ಸೀರೆಗಳಲ್ಲಿ ರೇಷ್ಮೆ ಸೀರೆಗೆ ಅಗ್ರಪಟ್ಟ ಇದ್ದರೂ ಖಾದಿ ಸೀರೆಗೆ ಬೇಡಿಕೆ ದಿನೇ ದಿನೇ ಹೆಚ್ಚುತ್ತಿದೆ.

ಹಿಂದೆ ವಯಸ್ಸಾದವರಿಗೆ ಮಾತ್ರ ಖಾದಿ ಎಂಬ ಭಾವನೆ ಇತ್ತು. ಆದರೆ ಇಂದು ಫ್ಯಾಷನಬಲ್ ಆಗಿ ಕಾಣುವ ಎಲ್ಲ ಮಹಿಳೆಯರೂ ಖಾದಿ ಸೀರೆ ಇಷ್ಟಪಡುತ್ತಾರೆ. ಹೀಗಾಗಿ ಎಲ್ಲೇ ಖಾದಿ ಉತ್ಸವ ನಡೆಯಲಿ, ಹೆಂಗಳೆಯರು ಲಗ್ಗೆ ಇಟ್ಟು ಮನಸೋ ಇಚ್ಛೆ ಸೀರೆ, ಉಡುಗೆ ಕುರ್ತಿ ಖರೀದಿಸಿ ತಮ್ಮ ಒಲವು ತೋರಿಸುತ್ತಾರೆ. ಸೆಲೆಬ್ರಿಟಿ, ನಟಿಯರು, ಮಾಡೆಲ್ ಮಣಿಗಳು ಖಾದಿಯನ್ನೇ ನೆಚ್ಚಿಕೊಂಡಿದ್ದಾರೆ.

ಆಧುನಿಕ ಜೀವನಶೈಲಿಗೆ ಒಗ್ಗಿಕೊಂಡ ಖಾದಿ ಬಟ್ಟೆ ಧರಿಸಲು ಎಂದಿಗೂ ಹಿತ. ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಖಾದಿ ಸಿಗುತ್ತದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಹೊಸ ಆಕರ್ಷಕ ಮಾದರಿಗಳಲ್ಲಿ ಸಿಗುತ್ತದೆ.

ಸೀರೆ ಮಾತ್ರವಲ್ಲದೆ ಚೂಡಿದಾರ್, ಕುರ್ತಾ, ಜುಬ್ಬಾ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ಬಳಸಲಾಗುತ್ತದೆ. ಒಗೆದಷ್ಟೂ ತೆಳುವಾಗುವ, ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಇನ್ನೂ ಉತ್ತಮವಾಗುತ್ತಾ ಹೋಗುತ್ತದೆ. ಒಂದು ಸೀರೆ ತಯಾರಾಗಬೇಕಾದರೆ ನೇಕಾರರ ಶ್ರಮ ವಿಪರೀತ. ಹೀಗಾಗಿ ಇದಕ್ಕೆ ತೆರುವ ಬೆಲೆ ದುಬಾರಿ ಎನಿಸಲಾರದು. ಉಳಿದ ಬಟ್ಟೆಯಿಂದ ಕೈಚೀಲ, ಕುಶನ್ ಕವರ್, ಕುಚ್ಚು ಮುಂತಾದವನ್ನು ತಯಾರಿಸಬಹುದು.

ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪ್ಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ. ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ. ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ.

ಸಿಂಥೆಟಿಕ್ ಸೀರೆ, ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಖಾದಿ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರ ವರೆಗೆ ಯಾರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಏಕೆಂದರೆ ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ. ಇದರಲ್ಲಿ ಥರಾವರಿ ಬೆಲೆಯ ಉಡುಗೆ ತೊಡುಗೆ ಸಿಗುವುದರಿಂದ ಯಾರು ಬೇಕಾದರೂ ಇದನ್ನು ಕೊಳ್ಳಬಹುದು.

## ಪುರುಷರಿಗೂ ಖಾದಿ

ಖಾದಿ ಉಡುಗೆ ಬರೀ ಮಹಿಳೆಯರಿಗಷ್ಟೇ ಸೀಮಿತವಲ್ಲ. ಪುರುಷರೂ ಖಾದಿ ಕುರ್ತಿ ತೊಟ್ಟು ಮಿಂಚುತ್ತಿದ್ದಾರೆ. ಪುಟ್ಟ ಹುಡುಗರು, ಖಾದಿ ಪೈಜಾಮ, ಜುಬ್ಬಾ ತೊಟ್ಟರೆ ಸಾಂಪ್ರದಾಯಿಕ ಲುಕ್ ಪಡೆಯಬಹುದು. ಖಾದಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್, ಪರ್ಸ್‌ಗಳು ಕೂಡ ಮಿಕ್ಸ್ ಅಂಡ್ ಮ್ಯಾಚ್ ಮಾಡುವವರಿಗೆ ಸೂಕ್ತ.

ರಾಷ್ಟ್ರೀಯ ಹಬ್ಬ ಸಮಯದಲ್ಲಿ ಮಾತ್ರ ತೊಡುತ್ತಿದ್ದ ಖಾದಿ ಉಡುಗೆ ಇದೀಗ ದಿನನಿತ್ಯದ ಉಡುಗೆಯಾಗಿ ಮಾರ್ಪಾಡಾಗಿದೆ. ಮಾಡೆಲಿಂಗ್ ತಾರೆಯರು, ಸೆಲೆಬ್ರಿಟಿ ಸಿನಿನಟಿಯರಿಂದ ಹಿಡಿದು ಸಾಮಾನ್ಯ ಮಹಿಳೆಯರವರೆಗೂ ಖಾದಿ ಬಟ್ಟೆ ಟ್ರೆಂಡ್ ಸೃಷ್ಟಿಸಿದೆ.

ಶಾರ್ಟ್ಸ್, ಸ್ಕರ್ಟ್ಸ್, ಸ್ಲೀವ್‌ಲೆಸ್ ಎಲ್ಲಾ ಬಗೆಯಲ್ಲಿ ಖಾದಿ ಉಡುಪುಗಳು ಈಗ ಲಭ್ಯ. ಬರೀ ಪೈಜಾಮ, ಕುರ್ತಾಗಳಿಗೆ ಮಾತ್ರ ಮೀಸಲಾಗಿದ್ದ ಖಾದಿ ಬಟ್ಟೆಗಳು ಸೀರೆ, ಶರ್ಟ್, ಪೈಜಾಮ, ಪರ್ಸ್, ಬ್ಯಾಗ್, ಖಾದಿ ದುಪಟ್ಟಾ, ಟಾಪ್ ರೂಪದಲ್ಲಿ ಲಭ್ಯ. ಸಣ್ಣಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲ ವಯೋಮಾನದವರಿಗೂ ಬೇಕಾದ ಟ್ರೆಂಡಿ, ಫ್ಯಾಷನಬಲ್ ಉಡುಪುಗಳ ವಿನ್ಯಾಸ ಖಾದಿ ಬಟ್ಟೆಯಲ್ಲೀಗ ಸಿಗುತ್ತದೆ.